14.08.2019 ಬುಧವಾರ | ಬೆಂಗಳೂರು

ಆಟಅಂಗಳ

ಫ್ಲ್ಯಾಟ್, ಗ್ರೀನ್, ಸೀಮಿಂಗ್, ಸ್ವಿಂಗ್, ಸ್ಲೋ, ಫಾಸ್ಟ್ ಸೇರಿದಂತೆ ಇಲ್ಲಿನ ಎಲ್ಲ ವಿಕೆಟ್‌ಗಳಿಗೂ ಅನುಗುಣವಾಗಿ ನಾವು ತಯಾರಿ ಮಾಡಿಕೊಂಡಿದ್ದೇವೆ. ಇದಕ್ಕೆ ಅನುಗುಣವಾಗಿ ನಮ್ಮ ಆಟಗಾರರು ಪ್ರದರ್ಶನ ತೋರಲಿದ್ದಾರೆ. ಈ ಬಾರಿ ಆಂಗ್ಲರ ನಾಡಲ್ಲಿ ಆ್ಯಶಸ್ ಟೆಸ್ಟ್ ಸರಣಿ ಗೆಲ್ಲಬೇಕು.

-ಮಿಚೆಲ್ ಸ್ಟಾರ್ಕ್, ಆಸ್ಟ್ರೇಲಿಯಾ ವೇಗಿ



ಟೆಸ್ಟ್ ಕ್ರಿಕೆಟ್ ಮೇಲೆ ವೈಯಕ್ತಿಕವಾಗಿ ಹೆಚ್ಚು ನಂಬಿಕೆ ಇಡುತ್ತೇನೆ. ಏಕೆಂದರೆ, ತಪ್ಪನ್ನು ತಿದ್ದಿಕೊಳ್ಳಲು ಹೆಚ್ಚಿನ ಅವಕಾಶಗಳು ಸಿಗಲಿವೆ. ಆದರೆ, ಏಕದಿನ ಕ್ರಿಕೆಟ್‌ನಲ್ಲಿ ಕೇವಲ 10 ಓವರ್ ಮಾತ್ರವಿದ್ದು, ನಾವು ಎಸಗಿದ ತಪ್ಪನ್ನು ತಿದ್ದಿಕೊಳ್ಳಬೇಕಾದರೆ, ಮತ್ತೊಂದು ಪಂದ್ಯದವರೆಗೂ ಕಾಯಬೇಕು.

-ಜೊಫ್ರಾ ಆರ್ಚರ್, ಇಂಗ್ಲೆಂಡ್ ವೇಗಿ



ಸಮಾಚಾರ ಸಣ್ಣದಲ್ಲ

## ಕೆಪಿಎಲ್ ಟ್ರೋಫಿ ಅನಾವರಣ




**ಬೆಂಗಳೂರು:** ಭಾರತದ ಮಾಜಿ ಕ್ರಿಕೆಟಿಗ ಬಿ.ಎಸ್ ಚಂದ್ರಶೇಖರ್, ಮಹಿಳಾ ಕ್ರಿಕೆಟ್ ಆಟಗಾರ್ತಿ ವೇದಾ ಕೃಷ್ಣ ಮೂರ್ತಿ ಹಾಗೂ ನಟ ಕಿಚ್ಚಾ ಸುದೀಪ್ ಅವರು ಎಂಟನೇ ಆವೃತ್ತಿ ಕರ್ನಾಟಕ ಪ್ರೀಮಿಯರ್ ಲೀಗ್ ಟ್ರೋಫಿಯನ್ನು ಅನಾವರಣ ಮಾಡಿದರು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಚಂದ್ರಶೇಖರ್, ಕೆಪಿಎಲ್ ಗ್ರಾಮೀಣ ಭಾಗದ ಕ್ರೀಡಾಪಟುಗಳಿಗೆ ವೇದಿಕೆಯಾಗಿದ್ದು, ಈ ಟೂರ್ನಿಯ ಟ್ರೋಫಿ ಅನಾವರಣ ಮಾಡಿದ್ದು ಸಂತಸ ತಂದಿದೆ. ಏಳು ಆವೃತ್ತಿಗಳನ್ನು ಯಶಸ್ವಿಯಾಗಿ ಪೂರೈಸಿರುವ ಕೆಪಿಎಲ್ ಜನರ ಮನ ಗೆದ್ದಿದೆ. ಈ ಟೂರ್ನಿಯಿಂದ ಇನ್ನಷ್ಟು ಪ್ರತಿಭೆಗಳು ಬೆಳಕಿಗೆ ಬರಲಿ ಎಂದು ಆಶಿಸಿದ್ದಾರೆ. ಕೆ.ಪಿ.ಎಲ್ ನಲ್ಲಿ ಆಡಿದ ಅನುಭವ ಉತ್ತಮವಾಗಿತ್ತು. ಈ ವೇದಿಕೆಯಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ ಯುವ ಆಟಗಾರರ ಅಭಿಮಾನಿಗಳ ಮನ ಗೆಲ್ಲುತ್ತಿದ್ದಾರೆ ಎಂದು ಸುದೀಪ್ ತಿಳಿಸಿದ್ದಾರೆ.

## ಟೆನಿಸ್: ತಟಸ್ಥ ಸ್ಥಳಕ್ಕೆ ಭಾರತ ಒತ್ತಾಯ

ALL INDIA TENNIS ASSOCIATION

**ದೆಹಲಿ:** ಡೇವಿಸ್ ಕಪ್ ಟೆನಿಸ್ ಟೂರ್ನಿ ಸೆಪ್ಟಂಬರ್‌ನಲ್ಲಿ ನಡೆಯಲಿದ್ದು, ಭದ್ರತಾ ಪರಿಸ್ಥಿತಿಯನ್ನು ಮರು ಪರಿಶೀಲನೆ ನಡೆಸುವಂತೆ ಭಾರತ ಟೆನಿಸ್ ಸಂಸ್ಥೆ, ಅಂತಾರಾಷ್ಟ್ರೀಯ ಟೆನಿಸ್ ಸಂಸ್ಥೆಗೆ ಒತ್ತಾಯಿಸಿದೆ. ಸೆ.14 ರಿಂದ 15ರ ವರೆಗೆ ನಡೆಯಲಿರುವ ಟೆನಿಸ್ ಟೂರ್ನಿಗೆ ಈಗಾಗಲೇ ಭಾರತ ತಂಡವನ್ನು ಪ್ರಕಟಿಸಲಾಗಿದೆ. ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆದ ಬಳಿಕ ಪಾಕ್, ಭಾರತದೊಂದಿಗಿನ ವ್ಯವಹಾರವನ್ನು ಸ್ಥಗಿತಗೊಳಿಸಿದೆ. 55 ವರ್ಷಗಳ ಬಳಿಕ ಪಾಕ್ ಪ್ರವಾಸ ಬೆಳೆಸಲಿದ್ದ ಭಾರತ ಟೆನಿಸ್ ತಂಡ, ತಟಸ್ಥ ಸ್ಥಳದ ಬೇಡಿಕೆ ಇಟ್ಟಿದೆ. ಭಾರತ ಟೆನಿಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹಿರಣ್ಮಯ್ ಚಟರ್ಜಿ ಅವರು, ಅಂತಾರಾಷ್ಟ್ರೀಯ ಟೆನಿಸ್ ಸಂಸ್ಥೆಗೆ ಪತ್ರ ಬರೆದಿದ್ದು, ಪಾಕಿಸ್ತಾನದಲ್ಲಿ ಭದ್ರತಾ ಪರಿಸ್ಥಿತಿಯನ್ನು ಮರುಪರಿಶೀಲನೆ ಮಾಡುವಂತೆ ಮನವಿ ಮಾಡಿದೆ.

ಮೂರನೇ ಕಾದಾಟ | ಗೆಲುವಿನ ಒತ್ತಡದಲ್ಲಿ ವೆಸ್ಟ್ ಇಂಡೀಸ್ | ಶಿಖರ್ ಧವನ್ ಮೇಲೆ ಹೆಚ್ಚಿದ ನಿರೀಕ್ಷೆ

# ಏಕದಿನ ಸರಣಿ ಮೇಲೆ ಭಾರತ ಕಣ್ಣು




**ಪೋರ್ಟ್ ಆಫ್ ಸ್ಪೇನ್:** ಸತತ ನಾಲ್ಕು ಪಂದ್ಯಗಳಲ್ಲಿ ವೈಫಲ್ಯ ಅನುಭವಿಸಿರುವ ಆರಂಭಿಕ ಬ್ಯಾಟ್ಸ್‌ಮನ್ ಶಿಖರ್ ಧವನ್ ಲಯಕ್ಕೆ ಮರಳುವತ್ತ ಗಮನ ಹರಿಸಿದರೆ, ಟೀಮ್ ಇಂಡಿಯಾ ಇಂದು ವೆಸ್ಟ್ ಇಂಡೀಸ್ ವಿರುದ್ಧ ನಡೆಯುವ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯದಲ್ಲಿ ಗೆದ್ದು ಏಕದಿನ ಸರಣಿ ಗೆಲ್ಲುವತ್ತ ಚಿತ್ತ ಹರಿಸಲಿದೆ.

ಐಸಿಸಿ ವಿಶ್ವಕಪ್ ಟೂರ್ನಿಯಲ್ಲಿ ಹೆಬ್ಬೆರಳು ಗಾಯಕ್ಕೆ ಒಳಗಾಗಿ ತಂಡದಿಂದ ಹೊರಗುಳಿದಿದ್ದ ಎಡಗೈ ಬ್ಯಾಟ್ಸ್‌ಮನ್ ಶಿಖರ್ ಧವನ್ ಕೆರಿಬಿಯನ್ ಪ್ರವಾಸಕ್ಕೆ ಮರಳಿದ್ದು, ವಿಂಡೀಸ್ ವಿರುದ್ಧದ ಟಿ-20 ಸರಣಿಯಲ್ಲಿ ಕ್ರಮವಾಗಿ 1, 23, 3 ರನ್ ಹಾಗೂ ಎರಡನೇ ಏಕದಿನ ಪಂದ್ಯದಲ್ಲಿ ಕೇವಲ ಎರಡು ರನ್ ಗಳಿಸಿದ್ದಾರೆ. ಬ್ಯಾಟಿಂಗ್ ಲಯ ಕಳೆದುಕೊಂಡು ತೀವ್ರ ಒತ್ತಡಕ್ಕೆ ಒಳಗಾಗಿರುವ ಧವನ್ ಎರಡು ಬಾರಿ ಶೆಲ್ಡನ್ ಕಾಟ್ರೆಲ್ ಅವರ ಇನ್ ಸ್ವಿಂಗ್ ಎಸೆತದಲ್ಲಿ ವಿಕೆಟ್ ಒಪ್ಪಿಸಿದ್ದಾರೆ.

ಟೆಸ್ಟ್ ತಂಡದಲ್ಲಿ ಸ್ಥಾನ ಕಳೆದುಕೊಂಡಿರುವ ದೆಹಲಿ ಬ್ಯಾಟ್ಸ್‌ಮನ್ ನಿಗದಿತ ಓವರ್‌ಗಳ ಮಾದರಿಯಲ್ಲಿ ಗಮನಾರ್ಹ ಪ್ರದರ್ಶನ ನೀಡುವ ಯೋಜನೆಯಲ್ಲಿದ್ದರು. ಆದರೆ, ಕಳೆದ ನಾಲ್ಕೂ ಪಂದ್ಯಗಳಲ್ಲಿ ವಿಫಲರಾಗಿದ್ದಾರೆ, ಇನ್ನುಳಿದಿರುವ ಒಂದು ಪಂದ್ಯದಲ್ಲಿ ರನ್ ಹೊಳೆ ಹರಿಸಬೇಕಾದ ಅನಿವಾರ್ಯತೆಗೆ ಅವರು ಒಳಗಾಗಿದ್ದಾರೆ.

ಟೀಮ್ ಇಂಡಿಯಾದಲ್ಲಿ ನಾಲ್ಕನೇ ಕ್ರಮಾಂಕಕ್ಕೆ ರಿಷಭ್ ಪಂತ್ ಹಾಗೂ ಶ್ರೇಯಸ್ ಅಯ್ಯರ್ ನಡುವೆ ಸ್ಪರ್ಧೆ ಏರ್ಪಟ್ಟಿದೆ. ಟಿ-20 ಸರಣಿಯ ಮೊದಲೆರಡು ಪಂದ್ಯಗಳಲ್ಲಿ ವಿಫಲರಾಗಿದ್ದ ಪಂತ್, ನಂತರ ಕೊನೆಯ ಪಂದ್ಯದಲ್ಲಿ ಮಿಂಚಿದ್ದರು. ಆದರೆ, ಎರಡನೇ ಏಕದಿನ ಪಂದ್ಯದಲ್ಲಿ ವಿಫಲರಾಗಿದ್ದರು. ಆದಾಗ್ಯೂ ವಿರಾಟ್ ಅವರು ಪಂತ್ ಪರ ಬ್ಯಾಟ್ ಬೀಸಿದ್ದರು. ಎರಡನೇ ಏಕದಿನ ಪಂದ್ಯದಲ್ಲಿ ಶ್ರೇಯಸ್ ಅಯ್ಯರ್ 68 ಎಸೆತಗಳಲ್ಲಿ 71 ರನ್ ಸಿಡಿಸಿರುವುದು ಪಂತ್ ಗೆ ಭವಿಷ್ಯದಲ್ಲಿ ನಾಲ್ಕನೇ ಸ್ಥಾನಕ್ಕೆ ಕುತ್ತು ಬರಬಹುದು.

ಸೋಮವಾರವಷ್ಟೆ ಸುನೀಲ್ ಗವಾಸ್ಕರ್, ಶ್ರೇಯಸ್ ಅಯ್ಯರ್ ಅವರು ಬ್ಯಾಟಿಂಗ್ ನಾಲ್ಕನೇ ಕ್ರಮಾಂಕಕ್ಕೆ ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಅಲ್ಲದೇ, ರಿಷಭ್ ಪಂತ್ ಅವರನ್ನು ಧೋನಿ ಸ್ಥಾನದಲ್ಲಿ ಐದು ಅಥವಾ ಆರನೇ ಸ್ಥಾನದಲ್ಲಿ ಕಣಕ್ಕೆ ಇಳಿಸಬೇಕೆಂದು ಸಲಹೆ ನೀಡಿದ್ದರು.

ಆರಂಭಿಕರಾದ ಶಿಖರ್ ಧವನ್ ಹಾಗೂ ರೋಹಿತ್ ಶರ್ಮಾ ಬಹುಬೇಗ ವಿಕೆಟ್ ಒಪ್ಪಿಸಿದ ಬಳಿಕ ನಾಯಕ ವಿರಾಟ್ ಕೊಹ್ಲಿ 125 ಎಸೆತಗಳಲ್ಲಿ 120 ರನ್ ಗಳಿಸಿದ್ದರು. ಇವರಿಗೆ ಮಧ್ಯಮ ಕ್ರಮಾಂಕದಲ್ಲಿ ಶ್ರೇಯಸ್ ಅಯ್ಯರ್ ಸಾಥ್ ನೀಡಿದ್ದರು.

ಬೌಲಿಂಗ್ ವಿಭಾಗದಲ್ಲಿ ತಮ್ಮ ಜವಾಬ್ದಾರಿಯನ್ನು ಸಂಪೂರ್ಣವಾಗಿ ನಿಭಾಯಿಸಿದ್ದ ಭುವನೇಶ್ವರ್ ಕುಮಾರ್ ಅವರು 31 ರನ್ ನೀಡಿ ಪ್ರಮುಖ ನಾಲ್ಕು ವಿಕೆಟ್ ಕಿತ್ತಿದ್ದರು. ಇದೇ ವಿಶ್ವಾಸದಲ್ಲಿ ಇರುವ ಅವರು ಇಂದಿನ ಪಂದ್ಯದಲ್ಲೂ ಮುಂದುವರಿಸುವ ತುಡಿತದಲ್ಲಿದ್ದಾರೆ.

ಭುವಿ ಜತೆಗೆ ಹಿರಿಯ ವೇಗಿ ಮೊಹಮ್ಮದ್ ಶಮಿ (39 ಕ್ಕೆ 2) ಹಾಗೂ ಕುಲ್ದೀಪ್ ಯಾದವ್ (59 ಕ್ಕೆ2) ಅವರು ವಿಕೆಟ್ ಕಿತ್ತಿದ್ದರು. ಆದರೆ, ಎಡಗೈ ಸ್ಪಿನ್ನರ್ ಮುಂದಿನ ಪಂದ್ಯಗಳಲ್ಲಿ ರನ್‌ಗಳಿಗೆ ಕಡಿವಾಣ ಹಾಕುವ ಅಗತ್ಯವಿದೆ.

ಇಂದಿನ ಪಂದ್ಯದಲ್ಲಿಯೂ ತಂಡದಲ್ಲಿ ಯಾವುದೇ ಬದಲಾವಣೆ ಮಾಡುವ ಸಾಧ್ಯತೆ ಕಡಿಮೆ ಇದೆ. ಆದರೆ, ಹಿರಿಯ ವೇಗಿ ಮೊಹಮ್ಮದ್ ಶಮಿಗೆ ವಿಶ್ರಾಂತಿ ನೀಡಿದರೆ, ಯುವ ವೇಗಿ ನವದೀಪ್ ಸೈನಿಗೆ ಅವಕಾಶ ನೀಡಬಹುದು.

ಮತ್ತೊಂದೆಡೆ ಟಿ-20 ಸರಣಿ ಕೈ ಚೆಲ್ಲಿಕೊಂಡಿರುವ ವೆಸ್ಟ್ ಇಂಡೀಸ್ ಏಕದಿನ ಸರಣಿಯ ಮೊದಲನೇ ಪಂದ್ಯದಲ್ಲೂ ಸೋಲು ಕಂಡಿದೆ. ಇಂದಿನ ಪಂದ್ಯದಲ್ಲಿ ಗೆದ್ದು ಸರಣಿ ಸಮಬಲ ಸಾಧಿಸಿಕೊಳ್ಳುವ ಯೋಜನೆಯಲ್ಲಿ ಕಣಕ್ಕೆ ಇಳಿಯಲಿದೆ.

ಆದರೆ, ವಿಂಡೀಸ್ ಬ್ಯಾಟಿಂಗ್ ವಿಭಾಗ ಹೆಚ್ಚಿನ ಹೊಣೆಯನ್ನು ತೆಗೆದುಕೊಳ್ಳುವಲ್ಲಿ ವಿಫಲವಾಗುತ್ತಿದೆ. ವೆಸ್ಟ್ ಇಂಡೀಸ್‌ನ ಯುವ ಪ್ರತಿಭೆಗಳಾದ ಶಾಯ್ ಹೋಪ್, ಶಿಮ್ರೊನ್ ಹೆಟ್ಮೇರ್ ಹಾಗೂ ನಿಕೋಲ್ಸ್ ಪೂರನ್ ಅವರು ತಮ್ಮ ಸಾಮರ್ಥ್ಯ ಸಾಬೀತುಪಡಿಸಲು ಇಂದು ಮತ್ತೊಂದು ಅವಕಾಶ ಸಿಗಲಿದೆ.

### ತಂಡಗಳು

**ವೆಸ್ಟ್ ಇಂಡೀಸ್:** ಕ್ರಿಸ್ ಗೇಲ್, ಕೇಮರ್ ರೋಚ್, ಕಾರ್ಲೋಸ್ ಬ್ರಾಥ್‌ವೇಟ್, ಜೇಸನ್ ಹೋಲ್ಡರ್ (ನಾಯಕ), ಎವಿನ್ ಲೆವಿಸ್, ಶೆಲ್ಡನ್ ಕಾಟ್ರೆಲ್, ನಿಕೋಲಸ್ ಪೂರನ್, ಫ್ಯಾಬಿಯನ್ ಅಲ್ಲೆನ್, ಶಿಮ್ರಾನ್ ಹೆಟ್ಮೇರ್, ಶಾಯ್ ಹೋಪ್(ವಿ.ಕೀ), ರೋಸ್ಟನ್ ಚೇಸ್, ಜಾನ್ ಕ್ಯಾಂಪ್‌ಬೆಲ್, ಕಿಮೋ ಪಾಲ್, ಓಶಾನ್ ಥಾಮಸ್

**ಭಾರತ:** ರೋಹಿತ್ ಶರ್ಮಾ, ರವೀಂದ್ರ ಜಡೇಜಾ, ವಿರಾಟ್ ಕೊಹ್ಲಿ(ನಾಯಕ), ಶಿಖರ್ ಧವನ್, ಭುವನೇಶ್ವರ್ ಕುಮಾರ್, ಕೇದಾರ್ ಜಾಧವ್, ಮೊಹಮ್ಮದ್ ಶಮಿ. ಕುಲ್ದೀಪ್ ಯಾದವ್, ಮೊಹಮ್ಮದ್ ಶಮಿ, ಕುಲ್ದೀಪ್ ಯಾದವ್, ಶ್ರೇಯಸ್ ಅಯ್ಯರ್, ರಿಷಭ್ ಪಂತ್(ವಿ.ಕೀ), ಖಲೀಲ್ ಅಹಮದ್, ಮನೀಶ್ ಪಾಂಡೆ, ಯಜುವೇಂದ್ರ ಚಾಹಲ್, ಕೆ.ಎಲ್. ರಾಹುಲ್, ನವದೀಪ್ ಸೈನಿ

### ಕೀ ಆಟಗಾರರು

| ಭಾರತ | ವೆಸ್ಟ್ ಇಂಡೀಸ್ |
| --- | --- |
| ಬ್ಯಾಟಿಂಗ್: ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ | ಬ್ಯಾಟಿಂಗ್: ನಿಕೋಲಸ್ ಪೂರನ್, ಶಾಯ್ ಹೋಪ್ |
| ಬೌಲಿಂಗ್: ಮೊಹಮ್ಮದ್ ಶಮಿ, ಭುವನೇಶ್ವರ್ ಕುಮಾರ್ | ಬೌಲಿಂಗ್: ಶೆಲ್ಡನ್ ಕಾಟ್ರೆಲ್, ಓಶೇನ್ ಥಾಮಸ್ |

### ರ್‍ಯಾಂಕಿಂಗ್

| ಭಾರತ | ವೆಸ್ಟ್ ಇಂಡೀಸ್ |
| --- | --- |
| 2 | 9 |




**ಸಮಯ:** ಇಂದು ಸಂಜೆ 07:00
**ಸ್ಥಳ:** ಕ್ವೀನ್ಸ್ ಪಾರ್ಕ್ ಓವಲ್, ಪೋರ್ಟ್ ಆಫ್ ಸ್ಪೇನ್

## ಮರ್ರೆಗೆ ಮೊದಲ ಸುತ್ತಿನಲ್ಲೆ ನಿರಾಸೆ

**ವಾಷಿಂಗ್ಟನ್:** ಮೂರು ಬಾರಿ ಗ್ರ್ಯಾನ್ ಸ್ಲ್ಯಾಮ್ ಚಾಂಪಿಯನ್ ಆ್ಯಂಡಿ ಮರ್ರೆ ಅವರು ಸಿನ್ಸಿನಾಟಿ ಓಪನ್ ಮೊದಲ ಸುತ್ತಿನ ಪಂದ್ಯದಲ್ಲೇ ರಿಚರ್ಡ್ ಗ್ಯಾಸ್ಕೆಟ್ ವಿರುದ್ಧ ಸೋತು ನಿರಾಸೆ ಅನುಭವಿಸಿದರು. ರಿಚರ್ಡ್ ಗ್ಯಾಸ್ಕೆಟ್ ಅವರು ಕಠಿಣ ಹೋರಾಟ ನಡೆಸಿ ಮರ್ರೆ ವಿರುದ್ಧ 6-4, 6-4 ಅಂತರದಲ್ಲಿ ಗೆದ್ದು ಎರಡನೇ ಸುತ್ತಿಗೆ ಲಗ್ಗೆ ಇಟ್ಟಿದ್ದಾರೆ. ಸೋಲಿನೊಂದಿಗೆ ಹಲವು ತಿಂಗಳು ಬಳಿಕ ಅಂಗಳಕ್ಕೆ ಮರಳಿದ್ದ ಆ್ಯಂಡಿ ಮರ್ರೆಗೆ ತೀವ್ರ ನಿರಾಸೆ ಉಂಟಾಯಿತು.

ನನಗೆ ಅನಿಸಿದ ಹಾಗೆ ಪಂದ್ಯದಲ್ಲಿ ಆಡಿದ್ದು ತೃಪ್ತಿ ತಂದಿದೆ. ನಾನು ಅಂದುಕೊಂಡಿದ್ದ ರೀತಿಯಲ್ಲಿ ಆಡಿದ್ದೇನೆ ಎಂದು ಪಂದ್ಯದ ಬಳಿಕ ಮರ್ರೆ ಪ್ರತಿಕ್ರಿಯಿಸಿದರು.

ಜನವರಿ 14 ರಂದು ನಡೆದಿದ್ದ ಆಸ್ಟ್ರೇಲಿಯಾ ಓಪನ್‌ನಲ್ಲಿ ಕೊನೆಯ ಬಾರಿ ಪುರುಷರ ಸಿಂಗಲ್ಸ್ ಪಂದ್ಯವಾಡಿದ್ದರು. ಐದು ಸೆಟ್‌ಗಳಲ್ಲಿ ಸೋಲು ಅನುಭವಿಸಿದ್ದರು. ಆ ವೇಳೆ ಅವರು ಟೆನಿಸ್ ವೃತ್ತಿ ಜೀವನಕ್ಕೆ ವಿದಾಯ ಹೇಳುವ ಮುನ್ಸೂಚನೆ ನೀಡಿದ್ದರು. 32ರ ಪ್ರಾಯದ ಮರ್ರೆ ಅವರು ಜನವರಿ 28 ರಂದು ಬಲ ಸೊಂಟದ ಮರುಕಳಿಸುವ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಇನ್ನೂ ಚೇತರಿಸಿಕೊಳ್ಳುತ್ತಿದ್ದಾರೆ.



### ಯುಎಸ್ ಓಪನ್ ಸಿಂಗಲ್ಸ್ ಆಡದಿರಲು ನಿರ್ಧಾರ

ಸಿನ್ಸಿನಾಟಿ ಓಪನ್ ಮೊದಲು ಸುತ್ತಿನಲ್ಲೇ ಸೋತು ನಿರಾಸೆಗೆ ಒಳಗಾಗಿರುವ ಬ್ರಿಟೀಷ್ ಟೆನಿಸ್ ತಾರೆ ಆ್ಯಂಡೆ ಮರ್ರೆ ಅವರು ಮುಂಬರುವ ಯುಎಸ್ ಓಪನ್ ಸಿಂಗಲ್ಸ್ ವಿಭಾಗದಲ್ಲಿ ಕಣಕ್ಕೆ ಇಳಿಯದಿರಲು ನಿರ್ಧರಿಸಿದ್ದಾರೆ. ಸತತ ಗಾಯದ ಸಮಸ್ಯೆಯಿಂದ ಬಳಲುತ್ತಿದ್ದ ಆ್ಯಂಡಿ ಮರ್ರೆ ಅವರು ಕಳೆದ ಜನವರಿಯಲ್ಲಿ ಜರುಗಿದ್ದ ಆಸ್ಟ್ರೇಲಿಯಾ ಓಪನ್‌ನಲ್ಲಿ ಸೋಲಿನ ಬಳಿಕ ತಮ್ಮ ಟೆನಿಸ್ ವೃತ್ತಿ ಜೀವನಕ್ಕೆ ವಿದಾಯ ಹೇಳುವ ಬಗ್ಗೆ ಭಾವುಕರಾಗಿ ಹೇಳಿದ್ದರು. ಸೊಂಟದ ಬಲ ಭಾಗದ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದ ಅವರು ಇನ್ನೂ ಚೇತರಿಸಿಕೊಳ್ಳುತ್ತಿದ್ದಾರೆ. ಹಾಗಾಗಿ, ಸಿಂಗಲ್ಸ್‌ನಲ್ಲಿ ಆಡಲು ಸ್ವಲ್ಪ ಕಠಿಣವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಯುಎಸ್ ಓಪನ್‌ನ ಸಿಂಗಲ್ಸ್‌ನಿಂದ ಹೊರಗುಳಿಯುತ್ತಿದ್ದಾರೆ. ಆದರೆ, ಯುಎಸ್ ಓಪನ್ ಪುರುಷರ ಡಬಲ್ಸ್ ಹಾಗೂ ಮಿಶ್ರ ಡಬಲ್ಸ್ ಆಡಲು ನಿರ್ಧರಿಸಿದ್ದಾರೆ.

## ಸೆಪ್ಟೆಂಬರ್‌ನಲ್ಲಿ ಪರಿಶೀಲನೆ: ಎಂಸಿಸಿ

**ಲಂಡನ್:** ಇಲ್ಲಿನ ದಿ ಲಾರ್ಡ್ಸ್ ಕ್ರೀಡಾಂಗಣದಲ್ಲಿ ಕಳೆದ ಜುಲೈ 14 ರಂದು ನಡೆದಿದ್ದ 2019ರ ಐಸಿಸಿ ವಿಶ್ವಕಪ್ ಟೂರ್ನಿಯ ಫೈನಲ್ ಹಣಾಹಣಿಯಲ್ಲಿ ಸಂಭವಿಸಿದ್ದ ಓವರ್ ಥ್ರೋ ಬಗ್ಗೆ ಮುಂಬರುವ ಸೆಪ್ಟೆಂಬರ್ ತಿಂಗಳಲ್ಲಿ ಪರಿಶೀಲಿಸಲಾಗುವುದು ಎಂದು ಮೆಲ್ಬೋರ್ನ್ ಕ್ರಿಕೆಟ್ ಕ್ಲಬ್(ಎಂಸಿಸಿ) ಸ್ಪಷ್ಟಪಡಿಸಿದೆ. ಇಂಗ್ಲೆಂಡ್ ಹಾಗೂ ನ್ಯೂಜಿಲೆಂಡ್ ನಡುವೆ ನಡೆದಿದ್ದ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ನೀಡಿದ್ದ 242 ರನ್ ಗುರಿ ಹಿಂಬಾಲಿಸಿದ್ದ ಇಂಗ್ಲೆಂಡ್ ತಂಡಕ್ಕೆ ಮೂರು ಎಸೆತಗಳಲ್ಲಿ 9 ರನ್ ಅಗತ್ಯವಿತ್ತು. ಈ ವೇಳೆ ಕ್ರೀಸ್‌ನಲ್ಲಿದ್ದ ಆಲ್ರೌಂಡರ್ ಬೆನ್ ಸ್ಟೋಕ್ಸ್ ಚೆಂಡನ್ನು ಕವರ್ಸ್ ಕಡೆ ಹೊಡೆದು ಒಂದು ರನ್ ಮುಗಿಸಿ ಎರಡನೇ ರನ್ ಓಡುತ್ತಿದ್ದ ವೇಳೆ ಮಾರ್ಟಿನ್ ಗುಪ್ಟಿಲ್ ಅವರು ರನೌಟ್ ಮಾಡಲು ಎಸೆದ ಚೆಂಡು ಸ್ಟೋಕ್ಸ್ ಬ್ಯಾಟ್‌ಗೆ ತಾಗಿ ಬೌಂಡರಿ ಗೆರೆ ದಾಟಿತು. ಈ ವೇಳೆ ಇಂಗ್ಲೆಂಡ್‌ಗೆ ಒಟ್ಟು ಆರು ರನ್ ನೀಡಲಾಯಿತು. ನಿಗದಿತ 50 ಓವರ್‌ಗಳಿಗೆ ಪಂದ್ಯ ಟೈ ಆಯಿತು. ನಂತರ, ಸೂಪರ್ ಓವರ್‌ನಲ್ಲೂ ಟೈ ಆಗಿದ್ದರಿಂದ ಬೌಂಡರಿ ನಿಯಮದ ಪ್ರಕಾರ ಇಂಗ್ಲೆಂಡ್‌ಗೆ ಚಾಂಪಿಯನ್ ಎಂದು ಘೋಷಿಸಲಾಯಿತು. ಐಸಿಸಿ ವಿಶ್ವಕಪ್ ಫೈನಲ್ ನಲ್ಲಿ ಸಂಭವಿಸಿದ ಓವರ್ ಥ್ರೋ ಬಗ್ಗೆ ಚರ್ಚೆ ಮಾಡಲು ವಿಶ್ವ ಕ್ರಿಕೆಟ್ ಸಮಿತಿ ನಿರ್ಧರಿಸಿದೆ. ಹಾಗಾಗಿ, ಓವರ್ ಥ್ರೋ ಬಗ್ಗೆ ಸೆಪ್ಟೆಂಬರ್‌ನಲ್ಲಿ 19.8 ನಿಯಮದ ಬಗ್ಗೆ ಪರಿಶೀಲಿಸಲಾಗುವುದು ಎಂದು ಎಂಸಿಸಿ ತಿಳಿಸಿದೆ.



## ಸಂದರ್ಶನಕ್ಕೆ ಆರು ಅಭ್ಯರ್ಥಿಗಳು ಅಂತಿಮ

**ಮುಂಬೈ:** ತೀವ್ರ ಕುತೂಹಲ ಕೆರಳಿಸಿರುವ ಟೀಮ್ ಇಂಡಿಯಾದ ಮುಖ್ಯ ತರಬೇತಿ ಹುದ್ದೆಗೆ ಮೈಕ್ ಹೆಸ್ಸನ್, ಟಾಮ್ ಮೂಡಿ, ರಾಬಿನ್ ಸಿಂಗ್, ಲಾಲ್ಚಂದ್ ರಜಪೂತ್, ಫಿಲ್ ಸಿಮೊನ್ಸ್ ಹಾಗೂ ರವಿ ಶಾಸ್ತ್ರಿ ಸೇರಿ ಒಟ್ಟು ಆರು ಅಭ್ಯರ್ಥಿಗಳನ್ನು ಕ್ರಿಕೆಟ್ ಸಲಹಾ ಸಮಿತಿ ಸಂದರ್ಶನಕ್ಕೆ ಹೆಸರಿಸಿದ್ದು, ಇಲ್ಲಿನ ಬಿಸಿಸಿಐ ಮುಖ್ಯ ಕಚೇರಿಯಲ್ಲಿ ಶುಕ್ರವಾರ ಸಂದರ್ಶನ ನಡೆಯಲಿದೆ. ಈ ಮೇಲೆ ಸೂಚಿಸಿರುವ ಆರು ಅಭ್ಯರ್ಥಿಗಳಿಗೆ ಬಿಸಿಸಿಐ ಸಂದರ್ಶನದ ದಿನ ಹಾಗೂ ಸಮಯದ ಬಗ್ಗೆ ಮಾಹಿತಿ ನೀಡಿದೆ. ಭಾರತದ ತಂಡದ ಮುಖ್ಯ ಕೋಚ್, ಬ್ಯಾಟಿಂಗ್, ಬೌಲಿಂಗ್, ಫೀಲ್ಡಿಂಗ್ ಸೇರಿದಂತೆ ವಿವಿಧ ವಿಭಾಗಗಳಿಗೆ ಒಟ್ಟು 2,000 ಅರ್ಜಿಗಳು ಸಲ್ಲಿಕೆಯಾಗಿದ್ದವು. ಮುಖ್ಯ ಕೋಚ್ ಹುದ್ದೆ ಮಾತ್ರ ಕಪಿಲ್‌ದೇವ್ ನೇತೃತ್ವದ ಕ್ರಿಕೆಟ್ ಸಲಹಾ ಸಮಿತಿ ಸ್ವತಂತ್ರವಾಗಿ ಆಯ್ಕೆ ಮಾಡಲಿದೆ. ಆದರೆ, ಇನ್ನುಳಿದಂತೆ ಸಹಾಯಕ ಕೋಚ್ ಹುದ್ದೆಗಳಿಗೆ ಆಯ್ಕೆ ಸಮಿತಿ ಅಧ್ಯಕ್ಷ ಎಂ.ಎಸ್.ಕೆ ಪ್ರಸಾದ್ ಅಂತಿಮಗೊಳಿಸಲಿದ್ದಾರೆ. ಕೆರಿಬಿಯನ್ನಲ್ಲಿ ಇರುವ ರವಿಶಾಸ್ತ್ರಿ ಅವರು ಇದೇ ಶುಕ್ರವಾರ ಮುಂಬೈನಲ್ಲಿ ನಡೆಯುವ ಸಂದರ್ಶನಕ್ಕೆ ಭಾಗವಹಿಸಲು ಸಾಧ್ಯವಿಲ್ಲ, ಹಾಗಾಗಿ, ಅವರನ್ನು ವೀಡಿಯೋ ಕರೆ ಮೂಲಕ ಕಪಿಲ್ ದೇವ್, ಅಂಶುಮಾನ್ ಗಾಯಕ್ವಾಡ್ ಮತ್ತು ಶಾಂತಾ ರಂಗಸ್ವಾಮಿ ಅವರನ್ನೊಳಗೊಂಡ ಕ್ರಿಕೆಟ್ ಸಲಹಾ ಸಮಿತಿ ಸಂದರ್ಶನ ನಡೆಸಲಿದೆ.



ಆ್ಯಶಸ್ ಟೆಸ್ಟ್ ಸರಣಿಯ ಎರಡನೇ ಪಂದ್ಯ: ಮರಳಿದ ಮಿಚೆಲ್ ಸ್ಟಾರ್ಕ್ | ಅಂತಾರಾಷ್ಟ್ರೀಯ ಟೆಸ್ಟ್‌ಗೆ ಆರ್ಚರ್ ಪದಾರ್ಪಣೆ?

# ಪುಟಿದೇಳುವ ತುಡಿತದಲ್ಲಿ ಇಂಗ್ಲೆಂಡ್

**ಲಂಡನ್:** ಪ್ರತಿಷ್ಠಿತ ಆ್ಯಶಸ್ ಸರಣಿಯ ಮೊದಲನೇ ಹಣಾಹಣಿಯಲ್ಲಿ ಆಸ್ಟ್ರೇಲಿಯಾ ವಿರುದ್ಧ 251 ರನ್‌ಗಳಿಂದ ಭಾರಿ ಅಂತರದಲ್ಲಿ ಸೋಲು ಅನುಭವಿಸಿದ್ದ ಆತಿಥೇಯ ಇಂಗ್ಲೆಂಡ್, ಇಂದು ದಿ ಲಾರ್ಡ್ಸ್ ಅಂಗಳದಲ್ಲಿ ಆರಂಭವಾಗುವ ಎರಡನೇ ಟೆಸ್ಟ್ ಪಂದ್ಯದ ಗೆದ್ದು ಸಮಬಲ ಸಾಧಿಸಿಕೊಳ್ಳುವ ತುಡಿತದಲ್ಲಿ ಕಣಕ್ಕೆ ಇಳಿಯಲಿದೆ.

ಎಜ್‌ಬಾಸ್ಟನ್ ಕ್ರೀಡಾಂಗಣದಲ್ಲಿ ಮೊದಲ ಪಂದ್ಯದ ಆರಂಭಿಕ ದಿನವೇ ಹಿರಿಯ ವೇಗಿ ಜೇಮ್ಸ್ ಅಂಡರ್ಸನ್ ಅವರು ಕೇವಲ ನಾಲ್ಕು ಓವರ್ ಎಸೆದು ಗಾಯಕ್ಕೆ ಒಳಗಾಗಿ ಅಂಗಳ ತೊರೆದಿದ್ದರು. ಆದಾಗ್ಯೂ ಪ್ರಥಮ ಇನಿಂಗ್ಸ್‌ನಲ್ಲಿ 90 ಮುನ್ನಡೆ ಗಳಿಸಿದ್ದ ಲಾಭ ಸದುಪಯೋಗಪಡಿಸಿಕೊಳ್ಳುವಲ್ಲಿ ಆಂಗ್ಲರು ವಿಫಲರಾಗಿದ್ದರು. ಎರಡನೇ ಇನಿಂಗ್ಸ್‌ನಲ್ಲಿ ಪುಟಿದೆದ್ದ ಆಸ್ಟ್ರೇಲಿಯಾ ಏಳು ವಿಕೆಟ್ ನಷ್ಟಕ್ಕೆ 487 ರನ್ ದಾಖಲಿಸಿತ್ತು. ಗುರಿ ಹಿಂಬಾಲಿಸಿದ್ದ ಇಂಗ್ಲೆಂಡ್ ದ್ವಿತೀಯ ಇನಿಂಗ್ಸ್‌ನಲ್ಲಿ ಬ್ಯಾಟಿಂಗ್‌ನಲ್ಲಿ ವಿಫಲವಾಗಿತ್ತು. ಅಂತಿಮವಾಗಿ ಆಸೀಸ್ ಭಾರಿ ಅಂತರದಲ್ಲಿ ಗೆದ್ದು ಪಾರಮ್ಯ ಸಾಧಿಸಿತ್ತು.

ಇಂದಿನ ಪಂದ್ಯದಲ್ಲಿ ಯುವ ವೇಗಿ ಜೊಫ್ರಾ ಆರ್ಚರ್ ಅವರಿಗೆ ನಾಯಕ ಜೋ ರೂಟ್ ಮೊರೆ ಹೋಗಲಿದ್ದಾರೆ. ಕಳೆದ ಪಂದ್ಯದಲ್ಲಿ ಸ್ಟೀವ್ ಸ್ಮಿತ್ 144 ಮತ್ತು 142 ಎರಡೂ ಇನಿಂಗ್ಸ್‌ಗಳಲ್ಲಿ ಶತಕ ಸಿಡಿಸಿದ್ದರು. ಇವರನ್ನು ಕಟ್ಟಿ ಹಾಕಲು ಆರ್ಚರ್‌ಗೆ ಜವಾಬ್ದಾರಿ ನೀಡಬಹುದು.

2005ರ ಬಳಿಕ ಎಜ್‌ಬಾಸ್ಟನ್ ಅಂಗಳದಲ್ಲಿ ಆಸ್ಟ್ರೇಲಿಯಾ ಜಯಭೇರಿ ಬಾರಿಸಿರುವುದು ಇದೇ ಮೊದಲು. ಸ್ಟೀವ್ ಸ್ಮಿತ್ ಎರಡು ಶತಕ ಹಾಗೂ ಮ್ಯಾಥ್ಯು ವೇಡ್ ಅವರ ಶತಕ ಪಂದ್ಯದ ಗೆಲುವಿನಲ್ಲಿ ಮಹತ್ತರ ಪಾತ್ರವಹಿಸಿತ್ತು. ಕಳೆದ ಪಂದ್ಯಕ್ಕೆ ಅಲಭ್ಯರಾಗಿದ್ದ ಮಿಚೆಲ್ ಸ್ಟಾರ್ಕ್ ಇಂದಿನ ಪಂದ್ಯಕ್ಕೆ ಮರಳುತ್ತಿದ್ದಾರೆ. ಕಳೆದ ತಿಂಗಳು ಮುಕ್ತಾಯವಾಗಿದ್ದ ಐಸಿಸಿ ವಿಶ್ವಕಪ್ ಟೂರ್ನಿಯಲ್ಲಿ ಸ್ಟಾರ್ಕ್ ಇದೇ ಅಂಗಳದಲ್ಲಿ ಎರಡು ಪಂದ್ಯಗಳಿಂದ ಒಂಬತ್ತು ವಿಕೆಟ್ ಕಿತ್ತಿದ್ದರು. ಹಾಗಾಗಿ, ಇವರ ಮೇಲೆ ಈ ಪಂದ್ಯದಲ್ಲಿ ಹೆಚ್ಚಿನ ನಿರೀಕ್ಷೆ ಇಡಲಾಗಿದೆ. ಎಜ್‌ಬಾಸ್ಟನ್ ಕ್ರೀಡಾಂಗಣದಲ್ಲಿ ಐದನೇ ದಿನ ನಥಾನ್ ಲಿಯಾನ್ 49 ರನ್ ನೀಡಿ ಆರು ವಿಕೆಟ್ ಕಿತ್ತು ಇಂಗ್ಲೆಂಡ್ ಪತನಕ್ಕೆ ಕಾರಣರಾಗಿದ್ದರು. ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಭಾರತ 1-0 ಮುನ್ನಡೆ ಪಡೆದಿದೆ.




ಸಮಯ: ಮಧ್ಯಾಹ್ನ 03:30

ಸ್ಥಳ: ದಿ ಲಾರ್ಡ್ಸ್, ಲಂಡನ್



### ಡೇವಿಡ್ ವಾರ್ನರ್ ಲಯಕ್ಕೆ ಮರಳಲಿದ್ದಾರೆ: ಲ್ಯಾಂಗರ್

ಆಸ್ಟ್ರೇಲಿಯಾ ತಂಡದ ಮುಖ್ಯ ಕೋಚ್ ಜಸ್ಟಿನ್ ಲ್ಯಾಂಗರ್ ಅವರು ಆ್ಯಶಸ್ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ವೈಫಲ್ಯ ಅನುಭವಿಸಿದ್ದ ಡೇವಿಡ್ ವಾರ್ನರ್ ಇಂದಿನಿಂದ ಆರಂಭವಾಗುವ ಎರಡನೇ ಪಂದ್ಯದಲ್ಲಿ ಲಯಕ್ಕೆ ಮರಳಲಿದ್ದಾರೆಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಮೊದಲನೇ ಪಂದ್ಯದಲ್ಲಿ ಡೇವಿಡ್ ವಾರ್ನರ್ ಅವರು ಕೇವಲ 10 ರನ್ ಮಾತ್ರ ಗಳಿಸಿದ್ದರು. ಆದಾಗ್ಯೂ, ಸ್ಟೀವ್ ಸ್ಮಿತ್ ಅವರ ಎರಡೂ ಇನಿಂಗ್ಸ್‌ಗಳಲ್ಲಿ ಸಿಡಿಸಿದ್ದ ಎರಡು ಶತಕಗಳ ನೆರವಿನಿಂದ ಆಸ್ಟ್ರೇಲಿಯಾ 251 ರನ್‌ಗಳಿಂದ ಭರ್ಜರಿ ಜಯ ಸಾಧಿಸಿತ್ತು. ಅದ್ಭುತ ಆಟಗಾರರು ವಿಫಲತೆಯನ್ನು ಇಷ್ಟಪಡುತ್ತೇನೆ. ಏಕೆಂದರೆ, ಅವರು ಶೀಘ್ರದಲ್ಲೇ ಲಯಕ್ಕೆ ಮರಳಲಿದ್ದಾರೆಂಬ ನಂಬಿಕೆ ಇದೆ. ಹಾಗಾಗಿ, ಎರಡನೇ ಕಾದಾಟದಲ್ಲಿ ಅವರು(ವಾರ್ನರ್) ಪುಟಿದೇಳಲಿದ್ದಾರೆಂಬ ವಿಶ್ವಾಸವಿದೆ ಎಂದರು.

### ತಂಡಗಳು

**ಆಸ್ಟ್ರೇಲಿಯಾ:** ಟಿಮ್ ಪೈನ್(ನಾಯಕ/ಕೀಪರ್) ಡೇವಿಡ್ ವಾರ್ನರ್, ಕ್ಯಾಮೆರೊನ್ ಬ್ಯಾನ್‌ಕ್ರಾಫ್ಟ್, ಉಸ್ಮಾನ್ ಖವಾಜ, ಸ್ಟೀವ್ ಸ್ಮಿತ್, ಟ್ರಾವಿಸ್ ಹೆಡ್, ಮ್ಯಾಥ್ಯೂ ವೇಡ್, ಪ್ಯಾಟ್ ಕಮಿನ್ಸ್, ಮಿಚೆಲ್ ಸ್ಟಾರ್ಕ್, ಪೀಟರ್ ಸಿಡ್ಲೆ, ನಥಾನ್ ಲಿಯಾನ್, ಜೋಶ್ ಹ್ಯಾಜಲ್‌ವುಡ್

**ಇಂಗ್ಲೆಂಡ್:** ರೋರಿ ಬರ್ನ್ಸ್, ಜೇಸನ್ ರಾಯ್, ಜೋ ರೂಟ್ (ನಾಯಕ), ಜೋ ಡೆನ್ಲಿ, ಜೋಸ್ ಬಟ್ಲರ್, ಬೆನ್ ಸ್ಟೋಕ್ಸ್, ಜಾನಿ ಬೈರ್‌ಸ್ಟೋವ್, ಮೊಯಿನ್ ಅಲಿ, ಕ್ರಿಸ್ ವೋಕ್ಸ್, ಸ್ಟುವರ್ಟ್ ಬ್ರಾಡ್, ಜೊಫ್ರಾ ಆರ್ಚರ್.




## ಬೋಪಣ್ಣ ಜೋಡಿಗೆ ಕಠಿಣ ಸವಾಲು



**ಸಿನ್ಸಿನಾಟಿ:** ಭಾರತದ ರೋಹನ್ ಬೋಪಣ್ಣ ಹಾಗೂ ಕೆನಡಾದ ಡೆನಿಸ್ ಶಪೋವೊಲೊವ್ ಜೋಡಿಯು ಇಲ್ಲಿ ನಡೆಯುತ್ತಿರುವ ಸಿನ್ಸಿನಾಟಿ ಓಪನ್‌ನಲ್ಲಿ ತಮ್ಮ ಮೊದಲನೇ ಸುತ್ತಿನ ಪಂದ್ಯದಲ್ಲಿ ಒಲಿಂಪಿಕ್ಸ್ ಪದಕ ವಿಜೇತ ಯುಎಸ್‌ನ ರಾಜೀವ್ ರಾಮ್ ಮತ್ತು ಗ್ರೇಟ್ ಬ್ರಿಟನ್ ಜೋ ಸಾಲಿಸ್ಬರಿ ಜೋಡಿಯ ವಿರುದ್ಧ ಸೆಣಸಲಿದೆ.

ಪುರುಷರ ಡಬಲ್ಸ್ ಮುಖ್ಯ ಸುತ್ತಿನ ಡ್ರಾನಲ್ಲಿ ರೋಹನ್ ಹಾಗೂ ಶಪೋವೊಲೊವ್ 30ನೇ ಶ್ರೇಯಾಂಕ ಪಡೆದಿದ್ದು, ರಾಜೀವ್ ಮತ್ತಯ್ಯ ಸಾಲಿಸ್ಬರಿ ಜೋಡಿಯು ಎಂಟನೇ ಶ್ರೇಯಾಂಕ ಪಡೆದಿದೆ. ಆರಂಭಿಕ ಸುತ್ತಿನಲ್ಲೇ ಬೋಪಣ್ಣ ಜೋಡಿ ಕಠಿಣ ಸವಾಲು ಎದುರಿಸಲು ಸಜ್ಜಾಗಿದೆ. ಮಂಗವಾರ 5ನೇ ಸಂಖ್ಯೆ ಕೋರ್ಟ್ ನಲ್ಲಿ ಒಂದು ಗಂಟೆಗೂ ಅಧಿಕ ಸಮಯ ಬೋಪಣ್ಣ ಜೋಡಿ ಅಭ್ಯಾಸ ನಡೆಸಿತು.

ಭಾರತದ ಮತ್ತೊಬ್ಬ ಆಟಗಾರ ರಾಮಕುಮಾರ್ ರಾಮನಾಥನ್ ಕೂಡ ಕಣದಲ್ಲಿದ್ದಾರೆ. 16ನೇ ಶ್ರೇಯಾಂಕ ಪಡೆದಿರುವ ಸಸಿಕುಮಾರ್ ಮುಕುಂದ್ ಅವರು ಸ್ಲೋವೇನಿಯಾ ಓಪನ್-2019ರ ಟೂರ್ನಿಯ ಮೊದಲನೇ ಸುತ್ತಿನಲ್ಲಿ ಬೈ ಸಿಕ್ಕಿದ್ದು, ಎರಡನೇ ಸುತ್ತಿನಲ್ಲಿ ಅಮೆರಿಕದ ಎವಾನ್ ಕಿಂಗ್ ವಿರುದ್ಧ ಸೆಣಸಲಿದ್ದಾರೆ.

ಭಾರತದ ಪೂರವ್ ರಾಜಾ ಮತ್ತು ಅಮೆರಿಕದ ರಮೀಜ್ ಜುನೈದ್ ಜೋಡಿಯು ಕೊಲಂಬಿಯಾದ ನಿಕೋಲಸ್ ಬ್ಯಾರಿಂಟಾಸ್ ಮತ್ತು ಬೆಹಾರ್ನ ಏರಿಯಲ್ ಬೆಹಾರ್ ಜೋಡಿಯನ್ನು ಮೊದಲನೇ ಸುತ್ತಿನಲ್ಲಿ ಎದುರಿಸಲಿದೆ.